ದಿನಾಂಕಃ**11/07/2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

12. ಇಂದು ಹಾಜರಿರುವ ಆರೋಪಿಯನ್ನು ಹಿಡಿಯಲು ಪೊಲೀಸರು ನನ್ನನ್ನು ಕರೆದು ಕೊಂಡು ಹೋಗಿದ್ದರು. ಆಗ ಆರೋಪಿಯನ್ನು ನೋಡಿದ್ದೆ. ನನ್ನನ್ನು ಪೊಲೀಸರು ಠಾಣೆಗೆ ಕರೆಯಿಸಿ ಒಂದು ರೆಕಾರ್ಡ ಮಾಡಿಕೊಳ್ಳಲಾದ ಸಂಭಾಷಣೆ ನನ್ನ ಸಮಕ್ಷಮ ಆಲಿಸಿದರು. ಸದರಿ ಸಂಭಾಷಣೆಯನ್ನು ಗುರುತಿಸಬಲ್ಲೆ. ಠಾಣೆಯಲ್ಲಿ ತಯಾರಿಸಲಾದ ಸ್ಯಾಂಪಲ್ ದ್ರಾವಣ ಹಾಗೂ ಕೈತೊಳೆದ ನಂತರ ಸಂಗ್ರಹಿಸಿದ ದ್ರಾವಣ ಗುರುತಿಸಬಲ್ಲೆ. ಈಗ ತೋರಿಸಿದ ಮುಮಾ-6 ಆ ದಿನ ಸಂಗ್ರಹಿಸಿದ ಮಾದರಿ ದ್ರಾವಣ ಇರುತ್ತದೆ.

13. (ನಿಪಿ-64 ಸಿಡಿಆರ್‌ನ್ನು ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ತೆರೆದ ನ್ಯಾಯಾಲಯದಲ್ಲಿ ಧ್ವನಿಯನ್ನು ಆಲಿಸಲಾಯಿತು.) ಈಗ ಆಲಿಸಿದ ನಿಪಿ-64 ರಲ್ಲಿಯ ಮಹಿಳೆ ಮತ್ತು ಪುರುಷನ ಸಂಭಾಷಣೆ ಆ ದಿನ ಆಲಿಸಿದ್ದೇ ಇರುತ್ತದೆ. (ರೂ.*3,000/-* ಎನ್ನುವ ಮಾತು ಕೇಳಿ ಬರುತ್ತದೆ.) ದಾಳಿ ನಂತರ ಪೊಲೀಸರು ದ್ರಾವಣ ತಯಾರಿಸಿ ಸ್ಯಾಂಪಲ್ ಕಾಯ್ದಿರಿಸಿದರು. ಸದರಿ ಸ್ಯಾಂಪಲ್‌ನ್ನು ಗುರುತಿಸಬಲ್ಲೆ.ಈಗ ತೋರಿಸಿದ ಮುಮಾ-5 ಆಗ ಕಾಯ್ದಿರಿಸಿದ ಸ್ಯಾಂಪಲ್ ಇರುತ್ತದೆ.

14. ದಾಳಿ ನಂತರ ಸಂಗ್ರಹಿಸಿದ ನೋಟುಗಳ ವಿವರಗಳನ್ನು ಬರೆದುಕೊಂಡು ಸಹಿ ಪಡೆದರು. ನನ್ನ ಸಹಿಯನ್ನು ನಿಪಿ-63(ಸಿ) ಎಂದು ಗುರುತಿಸಲಾಯಿತು. ಲಂಚದ ಹಣ ಇಟ್ಟ ಜಾಗೆ ಸವರಲು ಉಪಯೋಗಿಸುವ ಹತ್ತಿ ಮಾದರಿ ಪಡೆದರು. ಸದರಿ ಮಾದರಿಯನ್ನು ಗುರುತಿಸಬಲ್ಲೆ. *(ಮಾನ್ಯ ವಿ.ಪ್ರಾ.ಸಾ.ಅ.ರವರ ವಿನಂತಿ ಮೇರೆಗೆ ಸೀಲ್ಡ ಕವರನ್ನು ತೆರೆದು ಅದರಲ್ಲಿಯ ಸ್ವತ್ತನ್ನು ಸಾಕ್ಷಿಗೆ ತೋರಿಸಲಾಯಿತು.)* ಈಗ ತೋರಿಸಿದ ಸ್ವತ್ತು ಆ ದಿನ ಮಾದರಿಗಾಗಿ ಪಡೆದ ಹತ್ತಿ ಇರುತ್ತದೆ. ಅದನ್ನು ಮುಮಾ-10 ಎಂದು ಗುರುತಿಸಲಾಯಿತು.

15. ಲಂಚದ ಹಣ ಇಟ್ಟ ಜಾಗೆಯನ್ನು ಹತ್ತಿಯಿಂದ ಸವರಿ, ಹತ್ತಿಯನ್ನು ದ್ರಾವಣದಲ್ಲಿ ಅದ್ದಿ ದ್ರಾವಣವನ್ನು ಕಾಯ್ದಿರಿಸಿದರು. ಈಗ ತೋರಿಸಿದ ಮುಮಾ-8 ಆಗ ತಯಾರಿಸಿದ ದ್ರಾವಣ ಇರುತ್ತದೆ. ಹತ್ತಿಯನ್ನು ಒಣಗಿಸಿ ಕಾಯ್ದಿರಿಸಿದರು. ದಾಳಿ ನಂತರದ ಪ್ರಕ್ರಿಯೆಯನ್ನು ವಿಡಿಯೋ ಮಾಡಲಾಯಿತು. ತಾನು ತಪ್ಪು ಮಾಡಿಲ್ಲವೆಂದು ಆರೋಪಿ ತಿಳಿಸಿದ. ಆರೋಪಿಯನ್ನು ವಶಕ್ಕೆ ಪಡೆದರು. ಆರೋಪಿಯ ಮೇಲಾಧಿಕಾರಿಯನ್ನು ಕರೆಸಿ ವಿಚಾರಿಸಿದರು. ಅವರು ಆರೋಪಿಯನ್ನು ಗುರುತಿಸಿದರು. ಬೇರೆ ಯಾವುದೇ ವಿಷಯ ನೆನಪಾಗುತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ದಾಖಲೆಗಳನ್ನು ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –**

16. ಚಾಸಾ-1 ಲಂಚ ಕೊಡಲು ಹೋದಾಗ ನಡೆದ ಸಂಭಾಷಣೆಯನ್ನು ರೆಕಾರ್ಡ ಮಾಡಿಕೊಂಡಿದ್ದು, ಅದನ್ನು ಆಲಿಸಿ ನೋಡಲಾಯಿತು ಎನ್ನುವುದು ನಿಜ. ಸದರಿ ಸಂಭಾಷಣೆಯನ್ನು ಆಲಿಸಿದರೆ ಗುರುತಿಸಬಲ್ಲೆ. (ಮಾನ್ಯ ವಿ.ಪ್ರಾ.ಸಾ.ಅ.ರವರ ವಿನಂತಿ ಮೇರೆಗೆ ಸೀಲ್ಡ ಕವರನ್ನು ತೆರೆದು ಅದರಲ್ಲಿಯ ಸಿಡಿಆರ್ ನ್ನು ಆಲಿಸಲಾಯಿತು. ಹೇಳಿನಿ ನೋಡ್ರಿ ಶಬ್ದ ಕೇಳಿಸಿತು.) ಈಗ ಆಲಿಸಿದ ಮಹಿಳೆ ಮತ್ತು ಪುರುಷನ ಸಂಭಾಷಣೆ ದಾಳಿ ನಂತರ ಆಲಿಸಿದ್ದೇ ಇರುತ್ತದೆ. ಸಿಡಿಆರ್ ನ್ನು ಮುಮಾ-11 ಎಂದು ಗುರುತಿಸಲಾಯಿತು.

17. ಪೊಲೀಸರು ಚಾಸಾ-1 ಮತ್ತು ಆರೋಪಿಯ ಮಾದರಿ ಧ್ವನಿ ಸಂಗ್ರಹಿಸಿ, ಪಂಚನಾಮೆ ತಯಾರಿಸಿ ನನ್ನ ಸಹಿ ಪಡೆದರು ಎನ್ನುವುದು ನಿಜ. ಈಗ ತೋರಿಸಿದ ಸಹಿ ನನ್ನದೇ ಇದ್ದು, ಅದನ್ನು ನಿಪಿ-54(ಬಿ) ಎಂದು ಗುರುತಿಸಲಾಯಿತು. ಆಗ ಪಡೆದ ಮಾದರಿ ಧ್ವನಿಯನ್ನು ಗುರುತಿಸಬಲ್ಲೆ. (ಮಾನ್ಯ ವಿ.ಪ್ರಾ.ಸಾ.ಅ.ರವರ ವಿನಂತಿ ಮೇರೆಗೆ ಸೀಲ್ಡ ಕವರನ್ನು ತೆರೆದು ಅದರಲ್ಲಿಯ ಸಿಡಿಆರ್ ನ್ನು ಆಲಿಸಲಾಯಿತು.) ಈಗ ಆಲಿಸಿದ ಧ್ವನಿ ಆರೋಪಿಯದೇ ಇದ್ದು, ಸಿಡಿಆರ್ ನ್ನು ಮುಮಾ-12 ಎಂದು ಗುರುತಿಸಲಾಯಿತು. (ಮಾನ್ಯ ವಿ.ಪ್ರಾ.ಸಾ.ಅ.ರವರ ವಿನಂತಿ ಮೇರೆಗೆ ಸೀಲ್ಡ ಕವರನ್ನು ತೆರೆದು ಅದರಲ್ಲಿಯ ಸಿಡಿಆರ್ ನ್ನು ಆಲಿಸಲಾಯಿತು.) ಈಗ ಆಲಿಸಿದ ಧ್ವನಿ ಚಾಸಾ-1 ರದೇ ಇದ್ದು, ಸಿಡಿಆರ್ ನ್ನು ಮುಮಾ-13 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಂ.ಸಿ.ಎಚ್. ವಕೀಲರಿಂದಃ–**

(ತನ್ನ ವಕೀಲರ ಸಂಬಂಧಿಕರು ತೀರಿಕೊಂಡಿದ್ದಾರೆ ಎಂದು ಆರೋಪಿ ಸಮಯ ಕೋರಿದ್ದು, ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.